**HRC**: 2/2025

**ಪಿ.ಡಬ್ಲ್ಯೂ-1**

**<u>ದಿಃ 12-06-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ಎದುರುದಾರರ ಪರ ಶ್ರೀ SGG ವಕೀಲರಿಂದ</u>**

7. ಅರ್ಜಿಯ ಸ್ವತ್ತಿನಿಂದ ನಾನಿರುವ ಮನೆಯವರೆಗೂ ಸುಮಾರು 100-120 ಅಡಿ ಇರುತ್ತದೆ. ಈವರೆಗೂ ನಾನು ನನ್ನ ವೈಯಕ್ತಿಕ ಕೆಲಸಗಳನ್ನು ನಾನೇ ನೋಡಿಕೊಳ್ಳುತ್ತಾ ಬಂದಿರುತ್ತೇನೆ ಎಂದರೆ ಸರಿ. ನನ್ನನ್ನು ನೋಡಿಕೊಳ್ಳಲು ನಾನು ಖಾಯಂ ಆಗಿ ಯಾರನ್ನು ಮನೆಯಲ್ಲಿ ಕೆಲಸಕ್ಕಾಗಿ ಇಟ್ಟುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಒಬ್ಬರು ಕೆಲಸಕ್ಕೆ ಹಗಲು ಹೊತ್ತಿನಲ್ಲಿ ಬಂದು ಹೋಗುತ್ತಾರೆ, ಆದರೆ ರಾತ್ರಿ ನಾನು ಒಬ್ಬಳೇ ಇರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮನೆಯ ಅಡುಗೆ ಕೆಲಸವನ್ನು ನಾನೇ ಮಾಡುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಕೆಲಸಕ್ಕೆ ಬಂದವರೊಂದಿಗೆ ಅಡುಗೆ ಕೆಲಸ ಮಾಡುತ್ತೇನೆ ಎಂದು ನುಡಿಯುತ್ತಾರೆ. ನನ್ನನ್ನು ನೋಡಿಕೊಳ್ಳಲು ನನಗೆ ಯಾರೂ ಕೆಲಸಕ್ಕೆ ಖಾಯಂ ಬೇಕಾಗಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾಹನಾ ಚಾಲನಾ ಪರವಾಣಿಗೆಯನ್ನು ಸಂಬಂಧಪಟ್ಟ ಸಂಸ್ಥೆಗೆ ಹಿಂದಿರುಗಿಸದೇ ಅದು ನನ್ನ ಬಳಿಯೇ ಇದ್ದು, ನಾನು ವಾಹನವನ್ನು ಚಲಾಯಿಸುತ್ತೇನೆ ಎಂದರೆ ಸರಿ. ನಾನು ಹೇಳಿದ ಮೇರೆಗೆ ವೈದ್ಯರು ನನಗೆ ಸಂಬಂಧಪಟ್ಟ ಪತ್ರವನ್ನು ನೀಡಿರುತ್ತಾರೆ ಎಂದರೆ ಸರಿ. ನಾನು ನನ್ನ ಅರ್ಜಿಯಲ್ಲಿ ಹೇಳಿರುವ ಅಂಶಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ನನಗೆ ಎದುರುದಾರರು ಆಗಸ್ಟ್ 2024 ರಂದು Money Order ಮೂಲಕ ಕಳುಹಿಸಿದ ಬಾಡಿಗೆಯನ್ನು ನಾನು ನಿರಾಕರಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಎದುರುದಾರರು ನನಗೆ ಬಾಡಿಗೆ ಹಣವನ್ನು ಆ ರೀತಿಯಾಗಿ ಕಳುಹಿಸಿದ ಕಾರಣ ನಾನು ನಿರಾಕರಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿಯಾಗಿ ನಾನು ದಿಃ04.09.2024 ಹಾಗೂ 07.10.2024 ರಂದು ಪ್ರತಿವಾದಿಯು ಕಳುಹಿಸಿದ ಹಣವನ್ನು ನಿರಾಕರಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು

**HRC**: 2/2025

**ಪಿ.ಡಬ್ಲ್ಯೂ-1**

ಬಾಡಿಗೆ ಅವಧಿ ಮುಗಿದಿದ್ದ ಕಾರಣ ನಾನು ಆ ರೀತಿಯಾಗಿ ನಿರಾಕರಿಸಿರುತ್ತೇನೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿ ಇದೆ.**

**Sd/-**

**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**